KAVP010062372022

Presented on : 19-09-2022
Registered on : 19-09-2022

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯಪುರ

ಎಸ್.ಸಿ. ನಂ.168/2022

ಫಿರ್ಯಾದಿದಾರರು: ಕರ್ನಾಟಕ ಸರ್ಕಾರದ ಪರವಾಗಿ ಪ್ರತಿನಿಧಿಸುವರು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆ.

ವಿರುದ್ಧ

ಆರೋಪಿ : ರವಿ ತಂ ಬಾಳಪ್ಪ ಜಾಲಮಟ್ಟಿ

### ದೋಷಾರೋಪಣೆ

ನಾನು ಶಿವಾಜಿ ಅನಂತ ನಾಲವಾಡೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ ಈ ಮೂಲಕ ನಿಮ್ಮ ವಿರುದ್ಧ ಈ ಕೆಳಕಾಣಿಸಿದ ಆಪಾದನೆಗಳನ್ನು ರೂಪಿಸಿರುತ್ತೇನೆ.

ಆರೋಪಿ:

ರವಿ ತಂ ಬಾಳಪ್ಪ ಜಾಲಮಟ್ಟಿ
ವಯಸ್ಸು: 26 ವರ್ಷ, ಉದ್ಯೋಗ: ಕೂಲಿ,
ಸಾ: ಅತಾಲಟ್ಟಿ ತಾ: ವಿಜಯಪೂರ.

ಮೊದಲನೆಯದಾಗಿ, ನೀನು ಆರೋಪಿ ನಿನ್ನ ಹೆಂಡತಿ ಹಾಗೂ ಫಿರ್ಯಾದಿಯ ಮಗಳಾದ ಮೃತ ಲಕ್ಷ್ಮೀಬಾಯಿ ಇವಳೊಂದಿಗೆ ಆಗಾಗ ಜಗಳ ಮಾಡಿ ಹೊಡಿಬಡಿ ಮಾಡುತ್ತಾ ಬಂದಿದ್ದು, ಈ ಬಗ್ಗೆ ಮೃತಳ ತಂದೆ, ತಾಯಿ ಹಾಗೂ ನಿನ್ನ ತಂದೆ ಮತ್ತು ಸಂಬಂಧಿಕರು ಕೂಡಿ ನ್ಯಾಯ ಪಂಚಾಯತಿ ಮಾಡಿದ್ದರೂ ಕೂಡಾ ನೀನು ನಿನ್ನ ಹೆಂಡತಿಯೊಂದಿಗೆ ಜಗಳ ಮಾಡುವದು ಬಿಟ್ಟಿರಲಿಲ್ಲ, ತನ್ನ ಸಂಬಂಧಿಕರು ನ್ಯಾಯ ಪಂಚಾಯತಿ ಮಾಡಿದ್ದಕ್ಕೆ ನಿನ್ನ ಹೆಂಡತಿ ಮೃತ ಲಕ್ಷ್ಮೀಬಾಯಿ ನಿನ್ನ ಮಾನ ಮರ್ಯಾದೆ ತೆಗೆಯುತ್ತಿದ್ದಾಳೆ ಅಂತಾ ಕೂಡಾ ಅವಳ ಮೇಲೆ ಸಿಟ್ಟಾಗಿ, ಫಿರ್ಯಾದಿಯ ಮಗಳಿಗೆ ಕೊಲೆ ಮಾಡುವ ಎರಡು ದಿನ ಮುಂಚೆ ನೀನು ಮನೆಗೆ

ಬಾರದೆ ಹೊರಗಡೆ ಊಟ ಮಾಡಿಕೊಂಡು ಇದ್ದು, ದಿನಾಂಕ 15-02-2022 ರಂದು ಬೆಳಗ್ಗೆ 6-30 ಗಂಟೆ ಸುಮಾರಿಗೆ ವಿಜಯಪೂರ ಗ್ರಾಮೀಣ ಪೊಲೀಸ್ ಠಾಣಾ ಹದ್ದಿ ಪೈಕಿ ಅತಾಲಟ್ಟಿ ಗ್ರಾಮದ ನಿನ್ನ ಬಾಬತ್ತಿನ ಜಮೀನದಲ್ಲಿಯ ಮನೆಯಲ್ಲಿ ನೀನು ನಿನ್ನ ಹೆಂಡತಿ ಲಕ್ಷ್ಮೀಬಾಯಿ ಇವಳಿಗೆ "ತಾನು ಕೂಲಿ ಕೆಲಸಕ್ಕೆ ಹೋಗುವದು ಇದೆ, ಬೇಗನೆ ಎದ್ದು ಅಡಿಗೆ ಮಾಡು" ಅಂತಾ ಅಂದಿದ್ದಕ್ಕೆ ಮೃತ ಲಕ್ಷ್ಮೀಬಾಯಿ "ಎರಡು ದಿನದಿಂದ ಹೊರಗಡೆನೇ ಊಟ ಮಾಡಿಕೊಂಡು ಇದ್ದು, ಈಗ ಕೂಡಾ ಹೊರಗಡೆ ಊಟ ಮಾಡು, ನಿನಗೂ ಕೂಡಾ ನಿನ್ನ ತಾಯಿಯ ಹಾಗೆ ತಿರುಗಾಡುವ ಚಟ ಬಿದ್ದಿದೆ" ಅಂತಾ ಒದರಾಡಿದಕ್ಕೆ ನೀನು ಆರೋಪಿ ಆಕೆಯ ಮೇಲೆ ಸಿಟ್ಟಾಗಿ ಆಕೆಯ ಕೊಲೆ ಮಾಡುವ ಉದ್ದೇಶದಿಂದ ಕೈಯಿಂದ ಆಕೆಯ ಕುತ್ತಿಗೆ ಹಿಚುಕಿ ಕೊಲೆ ಮಾಡಿ ತನ್ಮೂಲಕ ಭಾರತೀಯ ದಂಡ ಸಂಹಿತೆ ಕಲಂ 302 ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ವಿಚಾರಣಾ ಸಂಜ್ಞೆಯೊಳಗಡೆ ಮಾಡಿರುವಿರಿ.

ಈ ಮೇಲೆ ಹೇಳಿದ ಅಪರಾಧಕ್ಕಾಗಿ ಆರೋಪಿತರಾದ ನೀವು ನನ್ನಿಂದ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

3/10

(ಶಿವಾಜಿ ಅನಂತ ನಾಲವಾಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

ದಿನಾಂಕಃ 03-10-2023